ಇ ಸಿ ಎ ನಂ. 2/2019
ಪಿ ಡಬ್ಲ್ಯೂ: 1
ದಿನಾಂಕ 18-09-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು: **2** ನೇ ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:</u>

ಮೃತ ಜಗದೀಶ್ ರವರು ನನ್ನ ತಂದೆಯಾಗಿರುತ್ತಾರೆ. ನನ್ನ ತಂದೆಗೆ ನಾನ ಒಟ್ಟು 4 ಜನ ಮಕ್ಕಳು ಇರುತ್ತೇವೆ. ಅವರೆಂದರೆ ಅರ್ಜಿದಾರರಾದ ದಾಕ್ಷಾಯಿಣಿ ಅಂಬಿಕ ನಾನು ಮತ್ತು ೧ನೇ ಎದುರುದಾರರಾದ ಮಂಜುನಾಥ. 1 ನೇ ಎದುರುದಾರರು ನನ್ನ ಹಿರಿಯ ಸಹೋದರರಾಗಿರುತ್ತಾರೆ. ಕೆಎ-03 ಎಸಿ-6268 ರ ಟಾಟಾ ಇಂಡಿಕಾ ಕಾರು 1 ನೇ ಎದುರುದಾರರ ಮಾಲೀಕತ್ವದಲ್ಲಿದೆ ಎಂದರೆ ಸರಿ. ಸದರಿ ಇಂಡಿಕಾ ಕಾರನ್ನು ನನ್ನ ತಂದೆ ಮೃತ ಜಗದೀಶ್ ರವರು ಚಾಲನೆ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಅವರು ಅದರ ಚಾಲಕನಾಗಿ ಚಾಲನೆ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಸದರಿ ಕಾರು ಚಾಲನೆ ಮಾಡುತ್ತಿದ್ದನ್ನು ನಾನು ನೋಡಿರುವುದಿಲ್ಲ, ಆದರೆ ಅಪಘಾತದ ಸಮಯದಲ್ಲಿ ನನಗೆ ದೂರವಾಣಿ ಕರೆ ಮಾಡಿ ನನಗೆ ಗೊತ್ತಾಗಿರುತ್ತದೆ. ಸಾಕ್ಷಿ ಮುಂದುವರೆದು ನನ್ನ ತಂದೆ ಆ ಸಮಯದಲ್ಲಿ ಪ್ಯಾಸೆಂಜರ್ ಗಳನ್ನು ಕರೆದುಕೊಂಡು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಅವರ ಸ್ನೇಹಿತರು ಉಜಿರೆಯಲ್ಲಿ ಒಂದು ಕಾರ್ಯಕ್ರಮಕ್ಕೆ ಹೋಗಿದ್ದರು ಎಂದರೆ ಸಾಕ್ಷಿ ನನ್ನ ಅಣ್ಣ ಪ್ಯಾಸೆಂಜರ್ ಗಳನ್ನು ಕಳುಹಿಸಿದ್ದು ಅವರನ್ನು ನನ್ನ ತಂದೆ ಉಜಿರೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ 1 ನೇ ಎದುರುದಾರರ ಬಳಿ ಚಾಲಕರಾಗಿ ಕೆಲಸ ಮಾಡುತ್ತಿದ್ದ ಬಗ್ಗೆ

ಯಾವುದಾದರೂ ದಾಖಲೆ ಇದೆಯಾ ಎಂದರೆ ಸಾಕ್ಷಿ ದಾಖಲೆ ಯಾವುದು ಇಲ್ಲ ಆದರೆ ಅಪಘಾತವಾಗುವ ಆರು ತಿಂಗಳ ಪೂರ್ವದಿಂದ ನನ್ನ ತಂದೆ ಒಂದನೇ ಎದುರುದಾರರ ಬಳಿಯೇ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ 1 ನೇ ಎದುರುದಾರರ ಬಳಿ ಅಪಘಾತವಾಗುವ ಆರು ತಿಂಗಳ ಪೂರ್ವದಿಂದ ಚಾಲಕರಾಗಿ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೆಎ-03 ಎಸಿ-6268 ರ ಟಾಟಾ ಇಂಡಿಕಾ ಕಾರು 1 ನೇ ಎದುರುದಾರರ ಖಾಸಗಿ ಕಾರು ಆಗಿರುತ್ತದೆ ಎಂದರೆ ಸಾಕ್ಷಿ ಅದು ಎಲ್ಲೋ ಬೋರ್ಡು ಕಾರು ಎಂದು ನುಡಿಯುತ್ತಾರೆ. ಆ ರೀತಿ ಎಲ್ಲೊ ಬೋರ್ಡು / ಟ್ಯಾಕ್ಸಿ ಆಗಿರುವ ಬಗ್ಗೆ ದಾಖಲೆ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ನನ್ನ ತಂದೆ ಹಾಜರುಪಡಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಬೀರೂರು ಮುನಿಸಿಪಾಲಿಟಿಯಲ್ಲಿ ಕೌನ್ಸಲರ್ ಆಗಿದ್ದರು ಎಂದರೆ ಸುಳ್ಳು. ೧ ನೇ ಎದುರುದಾರರ ಕಾರು ಟ್ಯಾಕ್ಸಿಯಾಗಿರುವ ಬಗ್ಗೆ ದಾಖಲೆ ನೋಡಿದ್ದೇನಾ ಎಂದರೆ ಸಾಕ್ಷಿ ಇಲ್ಲ ಆದರೆ ಎಲ್ಲೋ ಬೋರ್ಡು ಇರುವುದನ್ನು ನಾನು ಗಮನಿಸಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಕಾರು ನನ್ನ ಅಣ್ಣನ ಖಾಸಗಿ ಕಾರಾಗಿರುತ್ತದೆ ಅದು ಟ್ಯಾಕ್ಸಿ ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಕಾರನ್ನು ಚಾಲನೆ ಮಾಡಲು ಸೂಕ್ತ ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸಾಕ್ಷಿ ಚಾಲನಾ ಪರವಾನಿಗಿ ಇತ್ತು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನಿಪಿ-9 ರ ಚಾಲನಾ ಪರವಾನಿಗಿ ಟ್ಯಾಕ್ಸಿ ಚಾಲನೆ ಮಾಡಲು ಅನುವು ಮಾಡಿಕೊಡುತ್ತದೆಯಾ ಎಂದರೆ ಸಾಕ್ಷಿ ಅದು ಹೆವೀ ಲೈಸೆನ್ಸ್ ಆಗಿದೆ ಎಂದು ನುಡಿಯುತ್ತಾರೆ. ನಿಪಿ-9 ರ ಚಾಲನಾ ಪರವಾನಿಗಿ ಕೇವಲ ಸರಕು ಸಾಗಣೆ ವಾಹನಗಳನ್ನು ಚಾಲನೆ ಮಾಡುಲು ಮಾತ್ರ

ಕೊಟ್ಟ ಪರವಾನಿಗಿ ಆಗಿರುತ್ತದೆ ಎಂದರೆ ಸಾಕ್ಷಿ ಎಲ್ ಎಂ ವಿ ವಾಹನಗಳನ್ನು ಚಾಲನೆ ಮಾಡಲು ಸಹ ಕೊಟ್ಟ ಪರವಾನಿಗಿ ಆಗಿದೆ ಎಂದು ನುಡಿಯುತ್ತಾರೆ. ಕೆಎ-03 ಎಸಿ-6268 ಕಾರಿಗೆ ಅಪಘಾತದ ಸಮಯದಲ್ಲಿ ಫಿಟ್ನೆಸ್ ಸರ್ಟಿಫಿಕೇಟು ಇರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ಸದರಿ ಕಾರು ಆ ಸಮಯದಲ್ಲಿ ಸಾರ್ವಜನಿಕ ಸ್ಥಳದಲ್ಲಿ ಚಾಲನೆ ಮಾಡಲು ಅರ್ಹ ಇರಲಿಲ್ಲ ಎಂದರೆ ಸರಿಯಲ್ಲ.

ಎದುರುಗಡೆಯಿಂದ ಬಂದ ವಾಹನದ ಸಂಖ್ಯೆ ಕೆಎ-09 ಎಂ-6548 ರ ಜೆನ್ ಕಾರನ್ನು ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಪೋಲೀಸರಿಗೆ ದೂರು ನೀಡಲಾಗಿರುತ್ತದೆ ಎಂದರೆ ಸರಿ. ಸದರಿ ಕಾರನ್ನು ಆಶಿಶ್ ಎಂಬುವವರು ಚಾಲನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕಾರಿನ ಚಾಲಕ ಅಪಘಾತದಲ್ಲಿ ಸ್ಥಳದಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಸದರಿ ಜೆನ್ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ನನ್ನ ಚಾಲನೆ ಮಾಡುತ್ತಿದ್ದ ಕಾರಿನ ಪ್ರಯಾಣಿಕರಾದ ಸುರೇಶ್ ರವರು ನಿಪಿ-2 ರಂತೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ. ಆ ಪ್ರಕಾರ ಪೋಲೀಸರು ತನಿಖೆ ಮಾಡಿ ಕೆಎ-09 ಎಂ-6548 ರ ಜೆನ್ ಕಾರನ್ನು ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ನಿಪಿ-6 ರಂತೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ಜೆನ್ ಕಾರಿಗೆ ಆ ಸಮಯದಲ್ಲಿ ವಿಮೆ ಇರಲಿಲ್ಲ ಮತ್ತು ಅದನ್ನು ಚಾಲನೆ ಮಾಡುತ್ತಿದ್ದ ಆಶಿಶ್ ರವರಿಗೆ ಚಾಲನಾ ಪರವಾನಿಗಿ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆಶಿಶ್ ರವರ ತಪ್ಪಿನಿಂದ ಅಪಘಾತವಾಗಿದ್ದರೂ ಸಹ 2 ನೇ ಎದುರುದಾರರ ವಿಮಾ ಸಂಸ್ಥೆಯಿಂದ ಅಕ್ರಮವಾಗಿ ಪರಿಹಾರ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಜೆನ್ ಕಾರಿನ

ಮಾಲೀಕರು ಮತ್ತು ವಿಮಾ ಸಂಸ್ಥೆಯನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅಪಘಾತದಿಂದ ನನ್ನ ತಂದೆಗೆ ಆದಂತಹ ಗಾಯಗಳು ವಾಸಿಯಾಗಿದ್ದವು ಎಂದರೆ ಸಾಕ್ಷಿ ವಾಸಿಯಾಗಿದ್ದರೂ ಸಹ ಅವರು ಬೆಡ್ ರೆಸ್ಟನಲ್ಲಿದ್ದು ಅವರಿಗೆ ಕೆಲಸ ಮಾಡಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಬೆಡ್ ರೆಸ್ಟನಲ್ಲಿದ್ದರೂ ಹಾಗೂ ನಿರಂತರ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ತಂದೆ ಅಪಘಾತದಿಂದಾಗ ಗಾಯಗಳಿಂದ ಮೃತ ಪಟ್ಟಿಲ್ಲ ಅವರು ವಯೋಸಹಜವಾಗಿ ಮರಣ ಹೊಂದಿರುತ್ತಾರೆ ಎಂದರೆ ಸಾಕ್ಷಿ ಅಪಘಾತದಿಂದ ಉಂಟಾದ ಗಾಯಗಳಿಂದ ಅವರು ಹಾಸಿಗೆ ಹಿಡಿದಿದ್ದು ಯಾವುದೇ ಕೆಲಸ ಮಾಡಲು ಸಾದ್ಯವಾಗುತ್ತಿರಲಿಲ್ಲ ಅದರಿಂದಲೇ ನನ್ನ ತಂದೆ ಮೃತ ಪಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಾಸಿಗೆ ಹಿಡಿಯುವಂತಹ ಯಾವುದೇ ಗಾಯಗಳು ನನ್ನ ತಂದೆಗೆ ಅಪಘಾತದಲ್ಲಿ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಬೆಡ್ ರೆಸ್ಟ ಪಡೆಯುವಂತೆ ವೈದ್ಯಕೀಯ ದಾಖಲೆಗಳನ್ನು ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲ ಆದರೆ ನನ್ನ ತಂದೆ ಕಾಲು ಸೊಂಟ ಮುರಿದುಕೊಂಡು 6 ತಿಂಗಳುಗಳ ಕಾಲ ಬೆಡ್ ರೆಸ್ಟನಲ್ಲಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮೂರು ವರ್ಷಗಳ ಹಿಂದೆ ದಿನಾಂಕ 16/06/2021 ರಂದು ಮೃತ ಪಟ್ಟಿರುತ್ತಾರೆ. ನನ್ನ ತಂದೆ ಅಪಘಾತದಿಂದಾದ ಗಾಯಗಳಿಂದ ಮೃತ ಪಟಿಟರುತ್ತಾರೆಂದು ಪೋಲೀಸರಿಗೆ ತಿಳಿಸಿರುತ್ತೇವಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಅದಕ್ಕೆ ಸಂಬಂದಪಟ್ಟಂತೆ ಪೋಲೀಸರು ಹೆಚ್ಚುವರಿ ದೋಷಾರೋಪಣಾ ಪತ್ರ ಸಲ್ಲಿಸಿಲ್ಲ ಎಂದರೆ ಸರಿ. ಅಪಘಾತದಿಂದಾದ ಉಂಟಾದ ಗಾಯಗಳಿಂದ ನನ್ನ ತಂದೆ ಮೃತ ಪಟ್ಟಿರುತ್ತಾರೆಂದು ನನ್ನ ತಂದೆಯ ಶವಪರೀಕ್ಷೆಯನ್ನು ಸಹ ಮಾಡಿಸಿಲ್ಲ

ಎಂದರೆ ಸರಿ. ಅಪಘಾತದಿಂದ ಉಂಟಾದ ಗಾಯಗಳಿಂದಲೇ ನನ್ನ ತಂದೆಗೆ ಸಾವು ಸಂಭವಿಸಿದೆ ಎಂದು ತೋರಿಸಲು ದಾಖಲೆಗಳು ಇಲ್ಲ ಎಂದರೆ ಸರಿ. ನನ್ನ ತಂದೆ, ನಾನು ಮತ್ತು ನನ್ನ ಸಹೋದರ ವಿಭಾಗವಾಗಿದ್ದೇವೆ ಎಂಬ ಬಗ್ಗ ಯಾವುದೆ ನೊಂದಾಯಿತ ವಿಭಾಗ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ತಂದೆ ಒಂದನೇ ಎದುರುದಾರರ ಬಳಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಎಂದರೆ ಸರಿಯಲ್ಲ. ಸದರಿ ಕಾರು ನಮ್ಮ ಕುಟುಂಬಕ್ಕೆ ಸೇರಿದ್ದಾಗಿದ್ದು, ಒಂದನೇ ಎದುರುದಾರರ ಹೆಸರಿನಲ್ಲಿ ನೊಂದಣಿಯಾಗಿದ್ದು, ಆ ಕಾರನ್ನು ನನ್ನ ತಂದೆ ಅವರ ಸ್ವಂತ ಬಳಕೆಗೆ ಪಡೆದಿರುತ್ತಾರೆ ಎಂದರೆ ಸುಳ್ಳು. ಅಪಘಾತವಾದ ದಿನ ನನ್ನ ತಂದೆ ಮೂಡುಬಿದರೆಯ ಬಳಿ ಇದ್ದಂತಹ ರಾಜಕೀಯ ಕಾರ್ಯಕ್ರಮಕ್ಕೆ ಅವರ ಸ್ನೇಹಿತರ ಜತೆ ೧ನೇ ಎದುರುದಾರರ ಕಾರಿನಲ್ಲಿ ಹೋಗಿದ್ದರು ಎಂದರೆ ಸಾಕ್ಷಿ ರಾಜಕೀಯ ಕಾರ್ಯಕ್ರಮಕ್ಕೆ ಹೋಗಿದ್ದು ನಿಜ ಆದರೆ ಆ ಕಾರ್ಯಕ್ರಮಕ್ಕೆ ೧ನೇ ಎದುರುದಾರರು ಪ್ಯಾಸೆಂಜರ್ ಗಳನ್ನು ಕರೆದುಕೊಂಡು ಹೋಗುವಂತೆ ನನ್ನ ತಂದೆಯನ್ನು ಚಾಲಕರಾಗಿ ಕಳುಹಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಕಾರನ್ನು ಆ ದಿನ ಬಾಡಿಗೆಗೆ ತೆಗೆದುಕೊಂಡು ಹೋದ ಬಗ್ಗ ದಾಖಲೆ ಇದೆಯಾ ಎಂದರೆ ಸಾಕ್ಷಿ ಬಾಯಿಮಾತಿನಲ್ಲಿ ಒಪ್ಪಂದ ಆಗಿದೆ ಎಂದು ನುಡಿಯುತ್ತಾರೆ. ಎಷ್ಟು ಬಾಡಿಗೆಗೆ ಒಪ್ಪಂದ ಆಗಿತ್ತು ಎಂದು ನನಗೆ ಹೇಳಲಾಗುವುದಿಲ್ಲ ಎಂದರೆ ಸರಿ. ನಾನು ಮತ್ತು ೧ನೇ ಎದುರುದಾರರು ವಿಶ್ವಾಸದಿಂದ ಇದ್ದೇವೆ ಎಂದರೆ ಸಾಕ್ಷಿ ಪ್ರತ್ಯೇಕವಾಗಿದ್ದೇವೆ ಆದರೆ ಮಾತುಕತೆ ಇದೆ ಎಂದು ನುಡಿಯುತ್ತಾರೆ. ಅರ್ಜಿದಾರರಾದ ನಾವು ಹಾಗೂ ೧ನೇ ಎದುರುದಾರರು ಈಗಲೂ ಸಹ ಒಟ್ಟು ಕುಟುಂಬದಲ್ಲಿದ್ದೇವೆ ಎಂದರೆ ಸರಿಯಲ್ಲ. ನನ್ನ ತಂದೆ ವೈಯುಕ್ತಿಕ ಕಾರಣಕ್ಕೆ ಕಾರನ್ನು ತೆಗೆದುಕೊಂಡು ಹೋಗಿರುವುದರಿಂದ ಅರ್ಜಿಯಲ್ಲಿ ಕೇಳಿದಂತೆ ನಾವು ಪರಿಹಾರ ಪಡೆಯಲು

ಬಾದ್ಯರಲ್ಲ ಎಂದರೆ ಸರಿಯಲ್ಲ. ೨ನೇ ಎದುರುದಾರರು ಪರಿಹಾರ ಕೊಡಲು ಬಾದ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.